# ಹಳೆ ಪಥ ಹೊಸ ಥಲ






ಕನ್ನಡದ ಮೊದಲ ವಾಕ್ಚಿತ್ರ 'ಸತಿ ಸುಲೋಚನಾ' ತೆರೆಕಂಡ ಮಾರ್ಚ್ 3 'ಕನ್ನಡ ಸಿನಿಮಾ ದಿನ'. ಈ ದಿನದ ಬಗ್ಗೆ ಕನ್ನಡ ಚಿತ್ರೋದ್ಯಮ ತಲೆ ಕೆಡಿಸಿಕೊಳ್ಳುವುದಿಲ್ಲ. ಆದರೆ, ಸಿನಿಮಾ ದಿನದ ಬೆನ್ನಿಗೆ ಅನಾವರಣಗೊಂಡಿರುವ 'ಚಿತ್ರಪಥ' ಕನ್ನಡ ಚಿತ್ರರಂಗದ ಅಮರ ಮಧುರ ಕ್ಷಣಗಳನ್ನು ದಾಖಲಿಸುವ ಪ್ರಯತ್ನದಲ್ಲಿದೆ.

■ ಪದ್ಮನಾಭ ಭಟ್

ಸಿನಿಮಾ ಯಾವತ್ತಿಂದಲೂ ಜನಾಕರ್ಷಣೆಯ, ಜನಪ್ರಿಯ ಮಾಧ್ಯಮ. ಹಾಗಾಗಿಯೇ ಅದರ ವೇಗವೂ ಹೆಚ್ಚು. ನಡಿಗೆಯಲ್ಲಿನ ಈ ವೇಗದ ಕಾರಣಕ್ಕೋ ಏನೋ, ಅದಕ್ಕೆ ಹಿಂತಿರುಗಿ ನೋಡುವ ಅಭ್ಯಾಸ ಕಡಿಮೆ. ಈ ಕ್ಷಣಕ್ಕೆ ಮಿಂಚಿ ಮರುಕ್ಷಣಕ್ಕೆ ಮರೆಯಾಗಿಬಿಡುವುದು ಅದರ ಶಕ್ತಿಯೂ ಹೌದು ಮಿತಿಯೂ ಹೌದು. ಹಾಗಾಗಿಯೇ ನಮಗೆ ಯಾವಾಗಲೂ ಚಿತ್ರರಂಗದ ಕೆನೆಪದರದಲ್ಲಿನವರು ಮಾತ್ರವೇ ಕಾಣಿಸುತ್ತಿರುತ್ತಾರೆ. ಕೆನೆಗಟ್ಟಲು ಕಾರಣರಾದ ಪರದೆ ಹಿಂದಿನ ಶ್ರಮಿಕರು, ಇಂದು ಆಕಾಶದೆತ್ತರ ಬೆಳೆದಿರುವ ಚಿತ್ರರಂಗಕ್ಕೆ ಅಡಿಪಾಯ ಹಾಕಿದವರು, ಮಣ್ಣು, ಇಟ್ಟಿಗೆ ಹೊತ್ತವರು ಕಾಣಿಸುವುದೇ ಇಲ್ಲ. ಅವರನ್ನು ನೆನಪಿಸಿಕೊಳ್ಳುವುದು ನಮ್ಮ ಕರ್ತವ್ಯ ಎಂದು ಜನರಿಗೆ ಬಿಡಿ, ಚಿತ್ರರಂಗದ ಮಂದಿಗೇ ಅನಿಸುವುದಿಲ್ಲ. ಹಾಗಾಗಿಯೇ ಚಿತ್ರರಂಗದ ಇತಿಹಾಸ ಎಂಬುದು ಇಂದಿಗೂ ಕೆಲವು ಹಿರಿಯರ ನೆನಪಿನ ಖಜಾನೆಯಲ್ಲಿಯೋ, ಮತ್ತೆ ಕೆಲವು ಬಡಾಯಿಕೋರರ ಬಾಯಿಪಟಾಕಿಯಲ್ಲಿಯೋ ಕಲಬೆರಕೆಗೊಂಡು ಜೀವ ಹಿಡಿದುಕೊಂಡಿದೆ.

ಅದರಾಚೆಗೂ ಅಧಿಕೃತವಾಗಿ ಸಾಕಷ್ಟು ದಾಖಲೆಗಳು ಇವೆಯಾದರೂ ಅವುಗಳನ್ನು ಒಂದೆಡೆಗೆ ಸೇರಿಸುವ, ಜನರಿಗೆ ತಲುಪಿಸುವ ಕೆಲಸ ಮುಖ್ಯವೆಂದು ಯಾರಿಗೂ ಅನಿಸುತ್ತಿಲ್ಲ. ಇಂಥ ಇತಿಹಾಸವನ್ನು ಅಧಿಕೃತವಾಗಿ ಕಟ್ಟುವ ಕೆಲಸ ಮಾಡಬೇಕಿದ್ದ ಸಿನಿಮಾ ಪತ್ರಿಕೋದ್ಯಮ, ಸ್ಟಾರ್ ನಟ/ನಟಿಯರ ಸ್ಟೇಟ್‌ಮೆಂಟುಗಳಲ್ಲಿ ಮೈಮರೆತಿದ್ದರೆ, ಅಕಾಡೆಮಿಗಳು ಮಾಡುವ ಅಲ್ಪಸ್ವಲ್ಪ ಕೆಲಸಗಳು ಗೋದಾಮಿನಲ್ಲಿ ದೂಳು ಹಿಡಿದು ನವೆಯುತ್ತಿವೆ.

ಇಂಥ ನಿರಾಶಾದಾಯಕ ನಸುಗತ್ತಲ ದಾರಿಯಲ್ಲಿ ದೊಂದಿ ಹಚ್ಚುವ ಕೆಲಸಕ್ಕೆ 'ಚಿತ್ರಪಥ' ಎಂಬ ವೆಬ್ ಪೋರ್ಟಲ್ ಮುಂದಾಗಿದೆ. ಹೆಸರೇ ಹೇಳುವ ಹಾಗೆ ಇದು ಚಿತ್ರರಂಗದ ಪಥವನ್ನು ಗುರ್ತಿಸುವ, ದಾಖಲಿಸುವ, ಜನರಿಗೆ ತಲುಪಿಸುವ ಉದ್ದೇಶವನ್ನು ಹೊಂದಿದೆ.


ಶಶಿಧರ ಚಿತ್ರದುರ್ಗ

ಸಿನಿಮಾ ಇತಿಹಾಸ, ಮಾಹಿತಿ, ಫೋಟೊಗಳನ್ನು ದಾಖಲಿಸುವುದರ ಜೊತೆಗೆ ಇಂದಿನ ಪೀಳಿಗೆಗೆ ಸಿನಿಮಾರಂಗದ ದಶಕಗಳ ಹಿಂದಿನ ಅಪೂರ್ವ ಮಾಹಿತಿ – ಫೋಟೊಗಳನ್ನು ತಲುಪಿಸುವುದು, ಸಿನಿಮಾ ಕುರಿತಾಗಿ ಉತ್ತಮ ಅಭಿರುಚಿ ರೂಪಿಸುವುದು 'ಚಿತ್ರಪಥ' ಪೋರ್ಟಲ್‌ನ ಆಶಯ. ಹಿರಿಯ ಸಿನಿಮಾ ಕಲಾವಿದರು ಹಾಗೂ ತಂತ್ರಜ್ಞರನ್ನು ಸ್ಮರಿಸುವುದರ ಜೊತೆಗೆ ಉತ್ತಮ ಬರಹ – ಲೇಖನ ವಿಶ್ಲೇಷಣೆಗಳ ಮೂಲಕ ಸಿನಿಮಾ ಮಾಧ್ಯಮದ ಕುರಿತಾಗಿ ಅಭಿರುಚಿ ಬೆಳೆಸುವ, ಹೊಸ ಒಳನೋಟಗಳನ್ನು ನೀಡುವ ನಿಟ್ಟಿನಲ್ಲಿ ಈ ಪೋರ್ಟಲ್ ಕೆಲಸ ಮಾಡಲಿದೆ ಎಂಬುದು 'ಚಿತ್ರಪಥ'ದ ರೂವಾರಿ ಶಶಿಧರ ಚಿತ್ರದುರ್ಗ ಅವರ ವಿವರಣೆ.

ಹದಿಮೂರು ವರ್ಷಗಳ ಕಾಲ ಹಲವು ಪತ್ರಿಕೆಗಳಲ್ಲಿ ಸಿನಿಮಾ ಪತ್ರಕರ್ತನಾಗಿ ಕೆಲಸ ಮಾಡಿರುವ ಶಶಿಧರ್, ಸಿನಿಮಾಗೆ ಸಂಬಂಧಿಸಿದಂತೆ ಏಳು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಸಿನಿಮಾ ಪತ್ರಕರ್ತನಾಗಿ ಕೆಲಸ ಮಾಡಿದ ಅನುಭವ ಮತ್ತು ಚಿತ್ರರಂಗದ ಇತಿಹಾಸದ ಬಗೆಗೆ ಇರುವ ಆಸಕ್ತಿಯೇ ಈ ವೆಬ್ ಪೋರ್ಟಲ್ ಚಾಲಕಶಕ್ತಿಗಳು.

ಈ ಪೋರ್ಟಲ್ ಬರೀ ಕನ್ನಡಕ್ಕಷ್ಟೇ ಸೀಮಿತಗೊಂಡಿಲ್ಲ. ಕನ್ನಡದ ಜೊತೆಗೆ ಭಾರತದ ಇತರೆ ಪ್ರಾದೇಶಿಕ ಭಾಷಾ ಸಿನಿಮಾ ಸೇರಿದಂತೆ ಜಾಗತಿಕ ಸಿನಿಮಾ ಕುರಿತಾಗಿಯೂ ಫೋಟೊ, ಮಾಹಿತಿ ಇರಲಿದೆ. ಜಾಗತಿಕ ಸಿನಿಮಾದ ವಸ್ತು–ವಿಷಯವನ್ನು ಕನ್ನಡಿಗರಿಗೆ ತಲುಪಿಸುವ ಕಿಟಕಿಯಾಗಿಯೂ 'ಚಿತ್ರಪಥ' ಆರ್ಕೈವ್ ಪೋರ್ಟಲ್ ಕಾರ್ಯನಿರ್ವಹಿಸಲಿದೆ.



ಬೆಂಗಳೂರು ಕಂಠೀರವ ಸ್ಟುಡಿಯೊದಲ್ಲಿ 'ಗುರುಶಿಷ್ಯರು' (1981) ಚಿತ್ರೀಕರಣ ಸೆಟ್‌ಗೆ ವರನಟ ಡಾ. ರಾಜಕುಮಾರ್ ಭೇಟಿ ನೀಡಿದ್ದ ಸಂದರ್ಭ. ನಟರಾದ ತೂಗುದೀಪ ಶ್ರೀನಿವಾಸ್, ವಿಷ್ಣುವರ್ಧನ್, ದ್ವಾರಕೀಶ್ ಮತ್ತಿತರರು ಇದ್ದಾರೆ.

ಫೋಟೊ: ಪ್ರಗತಿ ಅಶ್ವತ್ಥ ನಾರಾಯಣ